# ಸೀತೆ

■ ಪ್ರವರ ಕೊಟ್ಟೂರು
ಚಿತ್ರ: ನಭಾ ಒಕ್ಕುಂದ



ಎಳ್ಳಾಕ್ಕೆ ಹೋಗಿದ್ದ ಬಣಕಾರ ಪರಸ ಮನೆಯನ್ನು ಸೇರಲಿಕ್ಕೆ ಸುಮಾರು ಹೊತ್ತಾದರೂ ಬೇಕಿತ್ತು, ಗದ್ದಿ ಕಲ್ಲೇಶನ ಗುಡಿಯನ್ನು ದಾಟಿಕೊಂಡು. ತೂಲಹಳ್ಳಿ ಕೊಟ್ರೇಶಪ್ಪನ ತೋಟದ ಮನೆಯನ್ನು ದಾಟಿಕೊಂಡು, ಹನಸಿ ಮುರುಗ್ಯಪ್ಪನ ಬೀಳು ಬಿದ್ದ ಗದ್ದೆಯ ತಂತಿ ಬೇಲಿಯನ್ನು ಸಲೀಸಾಗಿ ದಾಟಿ, ಗದ್ದೆಯ ಬದುವಿನಲ್ಲಿ ಸೊಂಪಾಗಿ ಬೆಳೆದ ಜಾಲಿ ಗಿಡಗಳ ಮರೆಯಲ್ಲಿ ದೇಹದ ನಾನಾ ಭಾಗಗಳಿಂದ ವಿಚಿತ್ರವಾದ ಸದ್ದು ಹೊರಡಿಸುತ್ತ, ಮುಖವನ್ನು ನಮೂನಿಯಾಗಿ ಕಿವುಚುತ್ತಾ ಬೆಳಗಿನ ಪವಿತ್ರ ಕಾರ್ಯ ಮುಗಿಸುವಲ್ಲಿ ನಿರತನಾಗಿದ್ದ. ಒಂದರ ಹಿಂದೊಂದರಂತೆ ಬೀಡಿಗಳನ್ನು ಸೇದಿ ಅವುಗಳನ್ನು ನೆಲಕ್ಕೆ ಉಜ್ಜಿದಲ್ಲಿ ಅವನಿಗೆ ಏನೋ ವಿಚಿತ್ರ ಅನುಭವ.

ಜಾಲಿ ಗಿಡದ ಮೂರೂವರೆ ಇಂಚಿನ ಮುಳ್ಳುಗಳಿಗೆ ಅರಿಬೆ ತುಂಡುಗಳು ಸಿಕ್ಕಿಕೊಂಡು ಸಣ್ಣಗೆ ಬೀಸುತ್ತಿದ್ದ ಗಾಳಿಯಲ್ಲಿ ಹಾರುತ್ತಿದ್ದವು. ಯಾರದೋ ಹರಿದ ಕುಬುಸ, ಲುಂಗಿ ಜಾಲಿ ಮುಳ್ಳುಗಳಿಗೆ ಸಿಕ್ಕಿ ಗಾಳಿಗೆ ಹಾರಾಡುತ್ತಾ ಸದ್ದು ಮಾಡಿದ್ದನ್ನು ಪರಸನ ಬಹು ಸೂಕ್ಷ್ಮ ಇಂದ್ರಿಯಗಳು ಗ್ರಹಿಸಿದ್ದವು. ಅವುಗಳ ನಡುವೆ ಇರುವ ಸಂಬಂಧಗಳ ಕ್ಷಣಮಾತ್ರದಲ್ಲಿ ಲೆಕ್ಕಾಚಾರವನ್ನು ಮಾಡಿರಲಾರನೆಂದು ಹೇಳಲಿಕ್ಕಾಗದು.

***

ತಳಗೇರಿ ಮಾರವ್ವನ ಗುಡಿಯ ಮುಂದೆ ಜನಗಳು ಅತ್ತಿಂದಿತ್ತ ಸಂಭ್ರಮದಿಂದ ಓಡಾಡುತ್ತಿದ್ದರು. ಗುಡಿಯ ಮುಂದೆ ನೂರೈವತ್ತು ಇನ್ನೂರು ವರ್ಷಗಳ ಹಳೆಯದಿದ್ದಿರಬಹುದಾದ ಬೇವಿನ ಮರದ ಸುತ್ತ ಕಟ್ಟಿದ ಕಲ್ಲಿನ ಕಟ್ಟೆಯಲ್ಲಿ ಅಂದು ಊರಿದ್ದ ಕೇರಿಯ ಮಳಗಪ್ಪ, ಸುಂಕಲಯ್ಯ, ಬೋಪಣ್ಣ,